ಕೃಷ್ಣರಾಜ ತಾಲ್ಲೂಕು ಸಾಲಿಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ

1109. ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ) : – ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕೃಷ್ಣರಾಜನಗರ ತಾಲ್ಲೂಕು ಸಾಲಿಗ್ರಾಮಕ್ಕೆ ಕಾವೇರಿ ನದಿಗೆ ಅಡ್ಡಲಾಗಿರುವ ಬೆಳ್ಳೂರು ಅಣೆಕಟ್ಟೆಯಿಂದ ಕುಡಿಯುವ ನೀರು ಸರಬರಾಜು ಯೋಜನೆ ಮಂಜೂರಾತಿಗಾಗಿ ಸರ್ಕಾರದ ಮುಂದಿದೆಯೆ ;

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ;

ಇ) ಈ ವರ್ಷದಲ್ಲಿ ಅಣೆಕಟ್ಟಿನ ಕಾರ್ಯ ನಿರ್ವಹಿಸಲು ಮಂಜೂರಾತಿ ಮಾಡಲಾಗುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು) –

ಅ) ಹೌದು.

ಆ) ರೂ. 35 ಲಕ್ಷಗಳು.

ಇ) ಆಡಳಿತಾತ್ಮಕ ಮಂಜೂರಾತಿ ವಿಷಯವು ಸರ್ಕಾರದ ಪರಿತೀಲನೆಯಲ್ಲಿದೆ.

ಬೆಂಗಳೂರು - ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾಡುವುದು

1102. ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಬೆಂಗಳೂರು - ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯ ಪಟ್ಟಿಯಲ್ಲಿ ಸೇರಿಸಲಾಗಿದೆಯೆ?

ಆ) ಸೇರಿದ್ದಲ್ಲಿ ಈ ರಸ್ತೆಯ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಈ ಕಾರ್ಯಕ್ಕೆ ಖರ್ಚಾಗುವ ಅಂದಾಜು ಹಣದ ಮೊತ್ತವೆಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಹೌದು

ಆ) ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ದೊರೆತಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷ್ಣಾ ನದಿಕೊಳ್ಳದಲ್ಲಿ ಪೂರ್ಣಗೊಂಡಿರುವ ನೀರಾವರಿ ಯೋಜನೆಗಳು

1471. ಡಾ. ಮಲಕ ರೆಡ್ಡಿ (ಯಾದಗಿರಿ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕೃಷ್ಣಾ ನದಿಕೊಳ್ಳದಲ್ಲಿ ಪೂರ್ಣಗೊಂಡಿರುವ ನೀರಾವರಿ ಯೋಜನೆಗಳು ಯಾವುವು ;

ಆ) ಪೂರ್ಣಗೊಳ್ಳುತ್ತಿರುವ ಯೋಜನೆಗಳ ಸಂಖ್ಯೆ ಎಷ್ಟು ;

ಇ) ಮೇಲ್ಕಂಡ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದ ಹಣ ;

ಈ) ಮೇಲ್ಕಂಡ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗುವ ಅಂದಾಜು ಸಮಯ (ತಿಂಗಳು ಮತ್ತು ವರ್ಷ) (ಯೋಜನಾವಾರು ವಿವರಗಳನ್ನು ನೀಡುವುದು) ;

ಉ) ಈ ದಿನದಂತೆ ಪ್ರತಿ ಯೋಜನೆಯಲ್ಲಿ ನೀರಾವರಿಯಾಗುತ್ತಿರುವ ಎಕರೆಗಳ ಸಂಖ್ಯೆ?